ಸದನದಲ್ಲಿ ಚರ್ಚೆಯಾಗಿದೆ. ಆದರೂ, ಇಲಾಖೆಯವರು ಕಾನೂನು ರೀತ್ಯ ಮಾಡಿಲ್ಲವೆಂದು ಹೇಳಿದ್ದೇನೆ. ಆದುದರಿಂದ, ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವಿರಾ?

SRI V M. KUSHNOOR.—I will look into the matter.

ಶ್ರೀ ಸಿ ಎಂ. ಇಬ್ರಾಹಿಂ.—ಸ್ವಾಮಿ ತಮಗೆ ಹೇಳುತ್ತೇನೆ, ತಾವು ಈ ರೀತಿ ಉತ್ತರಗಳನ್ನು ಕೊಡುವುದನ್ನು ನೋಡಿದರೆ, ಮುಂದೆ ದೊಡ್ಡ ಚಳುವಳಿಯಾಗತಕ್ಕಂಥ ಪರಿಸ್ಥಿತಿ ಬರುತ್ತದೆ.

ಅಧ್ಯಕ್ಷರು.—ಇದರ ಬಗ್ಗೆ ನೋಟೀಸ್ ಕಳುಹಿಸಿಕೊಡಿ.

ಶ್ರೀ ಸಿ. ಎಂ. ಇಬ್ರಾಹಿಂ.—ಕೆಳಹಿಸುತ್ತೇನೆ. ಇವರು ಕೊಡತಕ್ಕ ಉತ್ತರ ಬಾಯಿ ಮಾತಿನಲ್ಲಿ ಒಂದು ರೀತಿ ಇರುತ್ತದೆ, ಇಲ್ಲೊಂದು ರೀತಿ ಇರುತ್ತದೆ. ಹೊರಸದನದಲ್ಲಿ ಇದೇ ಸದನದಲ್ಲಿ ಹೇಳಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ ಪ್ರತಿಯೊಂದು ಸಂದರ್ಭದಲ್ಲಿಯೂ ಕೂಡ ಲಂಚ ತೆಗೆದುಕೊಂಡು ಕಾಯಿದೆಗೆ ವಿರುದ್ಧವಾಗಿ ಲೈಸೆನ್ಸ್‌ಗಳನ್ನು ಕೊಟ್ಟು, ನಮಗೆ ಮೂರುಕಾಸಿನ ಬೆಲೆ ಇಲ್ಲದಹಾಗೆ ಮಾಡಿದ್ದಾರೆ. ನಮಗೆ ಈ ವಿಚಾರದಲ್ಲಿ ಒತ್ತಾಯ ಮಾಡಬೇಡಿ ಎಂದು, ಅಬ್ಜೆಕ್ಷನ್ ಹಾಕಬೇಡಿ ಎಂದು ವಿರೋಧ ಮಾಡಬೇಕೆಂದು ನಮಗೆ ಕೇಳಿಕೊಳ್ಳುತ್ತಾರೆ. ಹಂಡ ಕುಡಿಯುವುದರಿಂದ ಅನಾಹುತವಾಗುತ್ತದೆನ್ನುವುದು ಗೊತ್ತಿದ್ದು. ಬೇಕೂಂತ ಈ ರೀತಿ ಲೈಸೆನ್ಸ್ ಕೊಡುವುದನ್ನು ತಪ್ಪಿಸುವುದಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೀರಾ? ಇದಕ್ಕೆ ತಮ್ಮಿಂದ ನಿರ್ದಿಷ್ಟವಾದ ಉತ್ತರವನ್ನು ಅಪೇಕ್ಷೆ ಪಡುತ್ತೇನೆ.

2-30 P.M.

SRI V. M KUSHNOOR.—It is not correct to say that the officers are taking bribes. There is a procedure laid down for the issue of licence. The respective officer will go the details and after enquiring into the objection petition etc., if they come to the conclusion that everything is correct, they will issue the licence. There are some interested persons. The Government is not going to accept whatever they say. As per the rules we are deciding the case.

ಶ್ರೀ ಭೀಮಣ್ಣ ಖಂಡ್ರೆ.- ಸಾಮಾನ್ಯವಾಗಿ ಸಣ್ಣವರು ದೊಡ್ಡವರು ಮಾಡಿದ್ದನ್ನು ಅನುಸರಿಸುತ್ತಾರೆ. ಪಾನ ನಿರೋಧ ಯಶಸ್ವಿಯಾಗಬೇಕಾದರೆ, ಮಂತ್ರಿಗಳು ಮತ್ತು ರಾಜ್ಯ ಮಂತ್ರಿಗಳು ಕುಡಿಯುವುದಿಲ್ಲವೆಂಬ ತೀರ್ಮಾನಕ್ಕೆ ಬಂದರೆ ಸಾಧ್ಯವಾಗಬಹುದು. ಈ ಬಗ್ಗೆ ತಾವು ಆಶ್ವಾಸನೆ ಕೊಡುತ್ತೀರಾ

SRI V. M. KUSHNOOR.—That is personal matter. I am not going to answer that question.

Sheep and Sheep Products Board

996. SRI M. GANGANNA (Kustagi).—Will the Chief Minister be pleased to State.—

(a) the year when the Sheep and Sheep Products Board started functioning;

(b) the amount released to this Board by the Government so far;

(c) the activities of this Board so far and what are their future programmes:

(d) whether it is a fact that there is a complaint that the persons knowing nothing about sheep and sheep products were nominated as members of the board, if so, the steps Government intend to take to set right this matter?

SRI K. H. SRINIVAS (Minister of State for Information and Youth Services) [on behalf of SRI D. DEVARAJ URS (Chief Minister)].—

(a) The Board held its first meeting on 31-3-1975.

(b) Rs. 6 lakhs during 1975-76. Rs. 25 lakhs during 1976-77.

(c) The Board prepared about 22 schemes and three draft rules. The Board has been asked to reconsider the said schemes. Hence, it is not possible to say about the future activities of the Board at this stage.

(d) There is no substance in the complaint. Hence the later part of the question does not arise.

ಶ್ರೀ ಎಂ. ಗಂಗಣ್ಣ.—೩೧-೩-೧೯೭೫ರಂದು ಪ್ರಥಮ ಸಮ್ಮೇಳನ ನಡೆದಿದೆಯೆಂದು ತಿಳಿಸಿದ್ದೀರಿ, ಅಲ್ಲದೆ, ೭೫-೭೬ರಲ್ಲಿ ೬ ಲಕ್ಷ ರೂಪಾಯಿ, ೭೬-೭೭ ರಲ್ಲಿ ೨೫ ಲಕ್ಷ ರೂಪಾಯಿ, ಕೊಡಲಾಗಿದೆಯೆಂದು ತಿಳಿಸಿದ್ದೀರಿ, ೭೮-೭೯, ೭೯-೮೦ಕ್ಕೆ ಎಷ್ಟು ಹಣ ಕೊಟ್ಟಿದ್ದೀರಿ ಎನ್ನುವ ವಿವರ ಇಲ್ಲ ಇದರ ಬಗ್ಗೆ ಏನು ಹೇಳುತ್ತೀರಿ?

† ಶ್ರೀ ಕೆ. ಎಚ್. ಶ್ರೀನಿವಾಸ್.—ತಾವು ಕೇಳಿಲ್ಲ? ಏನು ಕೇಳಿದ್ದೀರಿ, ಅದನ್ನು ಕೊಟ್ಟಿದ್ದೇವೆ.

ಶ್ರೀ ಎಂ. ಗಂಗಣ್ಣ.—ಇಲ್ಲಿಯವರೆಗೂ ಸರಕಾರ ಎಷ್ಟು ಹಣವನ್ನು ಈ ಮಂಡಲಿಗೆ ಬಿಡುಗಡೆ ಮಾಡಿದೆಯೆಂದು ಕೇಳಿದ್ದೇನೆ, ಆದರೆ ೩೧-೩-೧೯೭೯ರ ವರೆಗೆ ಕೊಡಬೇಕಾಗಿತ್ತಲ್ಲವೆ?

ಶ್ರೀ ಕೆ. ಎಚ್. ಶ್ರೀನಿವಾಸ್.—ಉತ್ತರದಲ್ಲಿ ತಿಳಿಸಿದಂತೆ ಎಷ್ಟು ಹಣ ಕೊಡಲಾಗಿದೆಯೋ ಅಷ್ಟು ಹಣ ಈಗ ಕೊಟ್ಟಿರತಕ್ಕಂಥಾದ್ದು.

ಶ್ರೀ ಎಂ. ಗಂಗಣ್ಣ. ಈ ಮಂಡಳಿಯು ಇಲ್ಲಿಯವರೆವಿಗೂ ಕೈಕೊಂಡ ಚಟುವಟಿಕೆಗಳಾವುವು? ಮುಂದಿನ ಯೋಜನೆಗಳಾವುವು? ಯೋಜನೆಗಳನ್ನು ಕಾರ್ಯಗತ ಮಾಡಲಿಕ್ಕೆ ಎಷ್ಟು ವರ್ಷಗಳಾಗುತ್ತವೆ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿಯೇ ಸ್ಪಷ್ಟಪಡಿಸಲಾಗಿದೆ. ಈ ಮಂಡಳಿಯವರು ೨೨ ಯೋಜನೆಗಳನ್ನು ಸರ್ಕಾರಕ್ಕೆ ಹಿಂದೆ ಕಳುಹಿಸಿಕೊಟ್ಟಿದ್ದರು, ಈ ಯೋಜನೆಗಳಲ್ಲಿ ಕೆಲವು ತೊಡಕುಗಳಿವೆ. ಇಲಾಖೆ ಮಾಡಿರತಕ್ಕವುಗಳಲ್ಲಿ ಕೆಲವನ್ನು ಮರಳಿ ತನ್ನ ಕೈಗೆ ತೆಗೆದುಕೊಳ್ಳಬೇಕಾಗಿದೆ. ಇದನ್ನೂ ಸೇರಿಸಿಕೊಂಡು ಪುನರ್‌ಪರಿಶೀಲನೆಗೆ ಕಳುಹಿಸಿದ್ದಾರೆ. ೯ ಯೋಜನೆಗಳು ಸರ್ಕಾರದ ಪರಿಶೀಲನೆಯಲ್ಲಿವೆ. ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಂ. ಗಂಗಣ್ಣ.—ನನ್ನ (ಈ) ಪ್ರಶ್ನೆಗೆ ದೂರು ನಿಜವಲ್ಲ, ಆದ್ದರಿಂದ ಎರಡನೇ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ತಿಳಿಸಿದ್ದೀರಿ? ಕಾನೂನು ಮಂತ್ರಿಯಾಗಲು ಕಾನೂನು ಪದವೀಧರರು ಬೇಕಿಲ್ಲ, ಆ ರೀತಿ ನಿಯಮವೂ ಇಲ್ಲ. ಕುರಿಯ ಅಭಿವೃದ್ಧಿ ಬಗ್ಗೆ ಏನೂ ಗೊತ್ತಿಲ್ಲದೇ ಇರತಕ್ಕವರು ಸದಸ್ಯರಾಗಿದ್ದಾರೆ. ತಮ್ಮ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೀರಿ ಇದು ಸರಿಯೆ?

ಶ್ರೀ ಕೆ. ಹೆಚ್. ಶ್ರೀನಿವಾಸ್. ಹಿಂದೆ ಇದ್ದಂತ ಮಂಡಲಿ ಬಗ್ಗೆ ತಾವು ಹೇಳಿದ್ದೀರಿ, ಇತ್ತೀಚೆಗೆ ಪುನರ್‌ಸಂಘಟನೆ ಆಗಿದೆ. ತಾವು ಹೇಳತಕ್ಕಂತೆ ಕುರಿಯ ವಿಚಾರದಲ್ಲಿ ತಿಳಿಯದೇ ಇರತಕ್ಕವರು ಇದ್ದರೆ ಆ ಬಗ್ಗೆ ವಿಚಾರ ಮಾಡಿ ನೋಡುತ್ತೇನೆ.

Loans through the Primary Land Development Banks

1019. SRI PRABHAKAR TELKAR (Chitapur).—Will the Minister for Co-operation be pleased to state :—